ಕಳುಹಿಸಿ ನೀವು. ನೀವು ಬೇರೆ ಏನು ಮಾಡಬೇಕಾಗಿಲ್ಲ. ಅವರು ಉದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರಾದ ಪುಟ್ಟೇಗೌಡರು ಹೇಳಿದರು. ಅಲ್ಲಿ ಸ್ಟ್ರೈಕ್ ಮಾಡುವ ಒಬ್ಬ ಎಂಪ್ಲಾಯಿ.....

ಡಾ: ಕೆ. ಅನ್ನದಾನಿ : ವೈಸ್‌ಚಾನ್ಸಲರ್‌ರವರನ್ನು ಬದಲಾವಣೆ ಮಾಡಿಬಿಡಿ. ಇಲ್ಲವಾದರೆ ಸಮಸ್ಯೆಯು ಬಗೆಹರಿಯುವುದಿಲ್ಲ. ವೈಸ್ ಚಾನ್ಸಲರ್‌ರವರಿಂದ ಇಂತಹ ಸಮಸ್ಯೆ ಉದ್ಭವವಾಗುತ್ತದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವೈಸ್‌ಚಾನ್ಸಲರ್‌ರವರಿಂದಲೇ ಈ ಸಮಸ್ಯೆ ಆಗಿರುವುದು. ಅವರಿಗೆ ಸಪೋರ್ಟ್ ಮಾಡುವಂತಹ ಅಧಿಕಾರಿಗಳು ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಇದರ ಬಗ್ಗೆ ಶಿಕ್ಷಣ ಸಚಿವರ ಜೊತೆಯಲ್ಲಿ ಮಾತನಾಡಿ ತಕ್ಷಣವೇ ಇವತ್ತು ಸಾಯಂಕಾಲದೊಳಗಾಗಿ ಇದರ ಬಗ್ಗೆ ನಿರ್ಣಯವನ್ನು ಕೈಗೊಳ್ಳುತ್ತೇವೆ.

ಉಪಾಧ್ಯಕ್ಷರು : ಇವತ್ತು ಸಾಯಂಕಾಲದೊಳಗೆ ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇವತ್ತೇ ಆಗಬೇಕು.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಸಾಯಂಕಾಲದೊಳಗಾಗಿ ನಿರ್ಣಯ ತೆಗೆದುಕೊಂಡು ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವೇನು ಮಾಡಬೇಕಾಗಿಲ್ಲ. ಬಿಒಎಂ ತೀರ್ಮಾನವನ್ನು ಜಾರಿಮಾಡಿದೆಯೆಂದು ಒಂದು ಆದೇಶವನ್ನು ಹೊರಡಿಸಿ.

ಶ್ರೀ ಜಗದೀಶ್‌ಶೆಟ್ಟರ್ : ಇವತ್ತು ಸಾಯಂಕಾಲದೊಳಗಾಗಿ ನಿರ್ಣಯ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು : ಮಾನ್ಯ ಶಿವಕುಮಾರ್‌ರವರು ಏನು ಕೇಳುತ್ತಾರೆ ನೋಡೋಣ. ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಇವತ್ತು ಸಾಯಂಕಾಲದೊಳಗಡೆ ಸಂಬಂಧಪಟ್ಟ ಇಲಾಖಾಧಿಕಾರಿಗಳ ಹತ್ತಿರ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿದ್ದಾರೆ. ಮತ್ತೆ ಅದನ್ನು ಏತಕ್ಕಾಗಿ ಹೇಳುತ್ತೀರಿ. ಮಾನ್ಯ ಶಿವಕುಮಾರ್‌ರವರೆ ತಾವು ಮಾತನಾಡಿ.

ಶ್ರೀ ಬಿ.ಎ. ಜೀವಿಜಯ : ಮಾನ್ಯ ಉಪಾಧ್ಯಕ್ಷರೆ, ...

ಉಪಾಧ್ಯಕ್ಷರು : ಮಾನ್ಯ ಜೀವಿಜಯರವರೆ, ಒಂದು ನಿಮಿಷ ತಾಳಿ.

ಬಿ.ಎ. ಜೀವಿಜಯ : ಚರ್ಚೆ ಇದೆ. ಅದಕ್ಕೆ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ತಾವು ಕೊಡಬೇಕು.

ಉಪಾಧ್ಯಕ್ಷರು : ಒಂದು ನಿಮಿಷ ತಮ್ಮನ್ನು ಕರೆಯುತ್ತೇನೆ.

(ಇ) **ಸಾತನೂರು ಕ್ಷೇತ್ರದ ಅಭಿವೃದ್ಧಿ ಹಾಗೂ ರಸ್ತೆಗಳ ರಿಪೇರಿ ಕೆಲಸ ಎರಡು ವರ್ಷದಿಂದ ಆಗದಿರುವ ಬಗ್ಗೆ.**

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಉಪಾಧ್ಯಕ್ಷರೆ, ಅಧಿವೇಶನ ಪ್ರಾರಂಭವಾದಾಗಿನಿಂದ ನಾನು ಇಲ್ಲಿಯವರೆವಿಗೂ ನನ್ನ ಕ್ಷೇತ್ರದ ರಸ್ತೆಗಳ ಬಗ್ಗೆ ಕಾಲಿಂಗ್

ಅಟೆನ್‌ಷನ್‌ನಲ್ಲಿ ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ. ಒಂದು ದಿನವು ಅಧ್ಯಕ್ಷರು ನನಗೆ ಅವಕಾಶವನ್ನು ಮಾಡಿಕೊಡಲಿಲ್ಲ. ಈ ಸಾರಿಯೂ ಕೂಡ ಮಾಡಿರುವುದಿಲ್ಲ. ಎಲ್ಲಾ ಕಾಲಿಂಗ್ ಅಟೆನ್‌ಷನ್‌ಗಳು ಬಂದಿದೆ. ನನ್ನದು ಮಾತ್ರ ಬರಲಿಲ್ಲ. ನಾನು ಬೇರೆ ಏನು ಕೇಳಿಕೊಂಡಿಲ್ಲ. ನಾನು ನನ್ನ ಕ್ಷೇತ್ರದ ರಸ್ತೆಗಳ ಬಗ್ಗೆ ಮಾತ್ರ ಕೇಳಿಕೊಂಡಿದ್ದೇನೆ. ಇವತ್ತಿನವರೆಗೂ ಸಾತನೂರು ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಿಂದ ಒಂದು ಲಕ್ಷ ರೂಪಾಯಿಗಳ ರಸ್ತೆ ಕೆಲಸ ಕೂಡ ಆಗುತ್ತಿಲ್ಲ. ಒಂದು ಲಕ್ಷ ರೂಪಾಯಿಗಳ ರಸ್ತೆ ರಿಪೇರಿ ಕೆಲಸ ಆಗಿಲ್ಲ. ಗ್ರಾಂಟ್ ಇಲ್ಲ, ಒಂದು ರಸ್ತೆಯನ್ನು ಸೇರಿಸಿಲ್ಲ. ಇಡೀ ರಾಜ್ಯದಲ್ಲಿ ಸಾತನೂರು ಕ್ಷೇತ್ರವನ್ನು ಮ್ಯಾಪ್‌ನಿಂದ ತೆಗೆದುಹಾಕಬೇಕೆಂದು ಹೊರಟಿದ್ದಾರೆ. ಅದು ಆಗಲಿ, ತೊಂದರೆಯಿಲ್ಲ. ಆದರೆ ನನ್ನ ಕ್ಷೇತ್ರದ ಡೆವಲಪ್‌ಮೆಂಟ್ ವಿಚಾರದಲ್ಲಿ ನಾನು ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡಬೇಕೆಂದು ಕೇಳಿದರೆ ನನಗೆ ಅನುಮತಿ ಕೊಡಲಿಲ್ಲವೆಂದರೆ, ಇಲ್ಲ ಉತ್ತರಗಳು ಸಿಗಲಿಲ್ಲವೆಂದರೆ ಏನು ಅನ್ಯಾಯ ಇದರ ಬಗ್ಗೆ ನನಗಂತೂ ಅರ್ಥವಾಗುತ್ತಿಲ್ಲ.

ಶ್ರೀ ಆರ್. ಅಶೋಕ್ : ನಿಮ್ಮದೇ ಸರ್ಕಾರ ಆಗ ಇತ್ತಲ್ಲಾ.

ಉಪಾಧ್ಯಕ್ಷರು : ಮಾನ್ಯ ಅಶೋಕ್‌ರವರೇ ತಾವು ಕುಳಿತುಕೊಳ್ಳಿ.

ಶ್ರೀ ಎ. ಕೃಷ್ಣಪ್ಪ : ನಮ್ಮದು ಸರ್ಕಾರ ಇತ್ತು. ಪಿಡಬ್ಲ್ಯೂಡಿ ನಿಮ್ಮ ಜೇಬಿನಲ್ಲಿತ್ತು.

ಶ್ರೀ ಎನ್. ಧರ್ಮಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ ಮಾನ್ಯ ಸದಸ್ಯರಾದ ಶಿವಕುಮಾರ್‌ರವರು ಪ್ರಶ್ನೆಯನ್ನು ಎತ್ತಿದ್ದಾರೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಬಹಳ ಅನ್ಯಾಯವಾಗಿದೆ. ಇದರ ಬಗ್ಗೆ ಚರ್ಚೆಯಾಗಬೇಕು ಎನ್ನುವಂತಹ ರೀತಿಯಲ್ಲಿ ಮಾನ್ಯ ಸಭಾಧ್ಯಕ್ಷರು ತಮಗೆ ಅನುಕೂಲಮಾಡಿಕೊಡುತ್ತೇನೆಂದು ಹೇಳಿದ್ದಾರೆ. ಇವತ್ತು ಸದನ ನಡೆಯುವ ಕೊನೆಯ ದಿನವಾಗಿದೆ. ಇದರ ಬಗ್ಗೆ ಯಾವ ರೀತಿಯಾಗಿ ಇದುವರೆವಿಗೂ ಕಾಲಿಂಗ್ ಅಟೆನ್‌ಷನ್ ಬಂದಿರುವುದಿಲ್ಲ. ಇವತ್ತು ಅವರ ಮತಕ್ಷೇತ್ರಕ್ಕೆ ಉದ್ದೇಶಪೂರ್ವಕವಾಗಿ ಆಗುತ್ತಿದೆ ಎನ್ನುವಂತಹ ಮಾತನ್ನು ಅವರು ಹೇಳುತ್ತಿದ್ದಾರೆ. ಅವರು ಹೇಳಿದ ಮೇಲೆ ಸರ್ಕಾರದಿಂದ ಸ್ಪಷ್ಟವಾದ ಉತ್ತರ ಬೇಕಾಗುತ್ತದೆ. ಅದಕ್ಕೆ ತಾವು 3 ಗಂಟೆಗೆ ಅಥವಾ ಸಂಬಂಧಪಟ್ಟಂತಹ ಮಾನ್ಯ ಮುಖ್ಯಮಂತ್ರಿಗಳೆ, ಲೋಕೋಪಯೋಗಿ ಇಲಾಖೆಯನ್ನು ಅವರು ವಹಿಸಿಕೊಂಡಿದ್ದಾರೆ ಅವರು ಬರಲಿ. ಇವತ್ತಿನ ದಿವಸ ಪಿಡಬ್ಲ್ಯೂಡಿದು ಚರ್ಚೆಯಾಗಬೇಕು. ಅವರ ಮನಸ್ಸಿಗೆ ಬೇಜಾರು ಆಗಿರುವುದರಿಂದ ಅವರು ಬಂದು ನನ್ನ ಹತ್ತಿರ ಜಗಳವಾಡುತ್ತಿದ್ದಾರೆ. ಎಲ್ಲಾ ಕಾಲಿಂಗ್ ಅಟೆನ್‌ಷನ್‌ಗಳು ಬರುತ್ತದೆ. ನನ್ನದು ಏತಕ್ಕಾಗಿ ಬರುತ್ತಿಲ್ಲ. ಬಾರದಿರಲು ಕಾರಣಗಳು ಗೊತ್ತಿಲ್ಲ. ಆದರೂ ಕೂಡ ಇವತ್ತಿನ ದಿವಸ ಅದರ ಬಗ್ಗೆ ಮಾಡುವುದರ ಬಗ್ಗೆ ತಾವು ಭರವಸೆಯನ್ನು ಕೊಡಬೇಕು. ಮತ್ತೆ ಅವರು ಪ್ರಸ್ತಾಪ ಮಾಡುತ್ತಾರೆ. ಅದರ ಬಗ್ಗೆ ತಾವು ಉತ್ತರ ಕೊಡಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಮುಖ್ಯಮಂತ್ರಿಗಳಿಗೆ ಪಿಡಬ್ಲ್ಯೂಡಿ ಮಿನಿಸ್ಟರ್‌ರವರಿಗೆ ಏನು ಡಿಸ್ಕ್ರಿಷನರಿ ಗ್ರಾಂಟ್ ಇದೆ. ಅದನ್ನು ಬೇಕಾದರೆ ಕೊಡದೇ ಇರಲಿ. ನಾನು ಕೇಳುವುದಿಲ್ಲ. ರೆಗ್ಯುಲರ್ ಆಗಿ ಕ್ಷೇತ್ರಕ್ಕೆ ಏನು ಗ್ರಾಂಟ್ ಬರಬೇಕೋ ಅದು ಕೂಡ ಕೊಡುವುದಕ್ಕಾಗುವುದಿಲ್ಲವೆಂದರೆ? ಕಳೆದ ಎರಡು ವರ್ಷಗಳಿಂದ ಒಂದು ಕೆಲಸಗಳು ಕೂಡ ನಡೆಯುತ್ತಿಲ್ಲ.

ಉಪಾಧ್ಯಕ್ಷರು : ಆಯಿತು. ಮಾನ್ಯ ಆಂಜನೇಯರವರೇ ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : 224 ಜನ ಶಾಸಕರು ಅವರವರ ಕ್ಷೇತ್ರದಲ್ಲಿ ಆಗಬೇಕಾದಂತಹ ರಸ್ತೆ ರಿಪೇರಿಯನ್ನು ಮಾಡಬೇಕಾಗಿರುತ್ತದೆ. ಇದರ ಬಗ್ಗೆ ರಾಜಕಾರಣ ಮಾಡುವುದು ಒಳ್ಳೆಯದಲ್ಲ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ. ರಾಜಕೀಯ ಮಾಡಿಕೊಂಡು ಕೆಲವು ಕ್ಷೇತ್ರಗಳಿಗೆ ಕೊಡುವುದು, ಕೆಲವು ಕ್ಷೇತ್ರಗಳಿಗೆ ಕೊಡದೆ ಇರುವುದು, ಬೇಕಾದವರಿಗೆ ಕೊಡುವುದು ಬೇಡದವರಿಗೆ ಕೊಡದೇ ಇರುವುದು, ಇದು ಒಳ್ಳೆಯ ಸೂಚನೆಯಲ್ಲ.

ಉಪಾಧ್ಯಕ್ಷರು : ಆಯಿತು. ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇವೆ. ಮಾನ್ಯ ಹೆಚ್. ಆಂಜನೇಯರವರೆ ತಾವು ಮಾತನಾಡಿ.

ಶ್ರೀ ಜೆ.ವಿ. ಜೀವಿಜಯ : ಮಾನ್ಯ ಉಪಾಧ್ಯಕ್ಷರೆ, ...

ಉಪಾಧ್ಯಕ್ಷರು : ತಾವು ಯಾವುದರ ಮೇಲೆ ಕೇಳುತ್ತಿದ್ದೀರಿ.

ಶ್ರೀ ಜೆ.ಎ. ಜೀವಿಜಯ : ನಾನು ರೂಲ್ ನಂ: 69 ಕೇಳುತ್ತಿದ್ದೇನೆ.

ಉಪಾಧ್ಯಕ್ಷರು : ಅದು ಮುಂದೆ ಇದೆ. ನಾವು ಇನ್ನು ಅದಕ್ಕೆ ರೀಚ್ ಆಗಿಲ್ಲ. ನಾವು ಇನ್ನು ಶೂನ್ಯವೇಳೆಯಲ್ಲಿದ್ದೇವೆ. ಕಾಲಿಂಗ್ ಅಟೆನ್‌ಷನ್ ರೀಚ್ ಆಗುತ್ತಿಲ್ಲ. 69 ಆಗಿಲ್ಲ. ಅರ್ಧಗಂಟೆ ಕಾಲಾವಧಿ ಚರ್ಚೆ ಅದು ರೀಚ್ ಆಗಿಲ್ಲ.

ಶ್ರೀ ಜೆ.ಎ. ಜೀವಿಜಯ : ಊಟವಾದ ನಂತರ ನಮಗೆ ಅವಕಾಶವನ್ನು ಮಾಡಿಕೊಡಿ. ನಮ್ಮದೇನು ಮಹತ್ವವಿಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಗೋವಾ ಸರ್ಕಾರ ಅದರ ಬಗ್ಗೆ ಗಮನ ಸೆಳೆದಿದ್ದೇನೆ.

ಉಪಾಧ್ಯಕ್ಷರು : ಮಾನ್ಯ ಜ್ಞಾನೇಂದ್ರರವರೆ ತಾವು ಕುಳಿತುಕೊಳ್ಳಿ. ಎಲ್ಲರೂ ಕೂಡ ಮಾತನಾಡಿದ್ದಾರೆ. ಶೂನ್ಯವೇಳೆಯಲ್ಲಿ ಎಲ್ಲರೂ ಮಾತನಾಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ತಾವು ಯಾರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ?

ಉಪಾಧ್ಯಕ್ಷರು : ತಾವೆಲ್ಲರೂ ಕುಳಿತುಕೊಂಡರೆ ಹೇಳಬಹುದು. ನಿಂತುಕೊಂಡರೆ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಗೋವಾ ಸರ್ಕಾರದವರು ಮೊದಲಿನಿಂದಲೂ ಕರ್ನಾಟಕವನ್ನು ಕಡೆಗಣಿಸಿದ್ದಾರೆ. ಕರ್ನಾಟಕದ ಮೇಲೆ ವಿನಾ ಕಾರಣ ಸಮರವನ್ನೇ ಸಾರುತ್ತಿದ್ದಾರೆ. ಅಲ್ಲಿರುವಂತಹ ಕನ್ನಡಿಗರನ್ನು ಹೊರಗಡೆ ಹಾಕಿ ಕನ್ನಡ ಸಂಘದವರನ್ನು ಹೊರಗೆ ಹಾಕಿ, ಅಲ್ಲಿ ಕೆಲಸ ಮಾಡತಕ್ಕಂತಹ ನಿರ್ಗತಿಕರು

ಕನ್ನಡಿಗರು, ಆ ಜನರನ್ನು ಹೊರಗಡೆ ಹಾಕಿದರು. ಅದಾದ ಮೇಲೆ ಈಗ ಗೋವಾದಲ್ಲಿರುವಂತಹ ಎಲ್ಲಾ ಕಸವನ್ನು ಕರ್ನಾಟಕದ ಮೇಲೆ ಸುರಿಯುತ್ತಿದ್ದಾರೆ. ಇದರ ಬಗ್ಗೆ ನಮ್ಮ ಸರ್ಕಾರ ಕೇಳಿಲ್ಲ. ಇದರ ಜೊತೆಗೆ ಕಳಸಾ–ಬಂಡೂರಿ ಬಗ್ಗೆ ಏನು ನಿರಂತರವಾದಂತಹ ಒತ್ತಾಯ ಆ ಪ್ರದೇಶದ ಜನ ಹಾಕುತ್ತಿದ್ದಾರೆ. ಇದರ ಬಗ್ಗೆ ಮೊನ್ನೆಯು ತಾವು ದೆಹಲಿಗೆ ಹೋಗಿದ್ದೀರಿ. ನಿಮ್ಮ ಮಾತುಕತೆಯು ವಿಫಲವಾಯಿತು ಎಂದು ಬಂದಿದೆ. ಅದರಿಂದಾಗಿ ಬರಸಿಡಿಲು ಬಡಿದಂತಾಗಿದೆ. ಈ ಬಗ್ಗೆ ಮೂರು ವಿಚಾರಗಳ ಬಗ್ಗೆ, ತಾವು ಸ್ಪಷ್ಟವಾಗಿ ಅವರು ಗೋವಾ ಮುಖ್ಯಮಂತ್ರಿಗಳ ಜೊತೆಯಲ್ಲಿ ಭೇಟಿ ಮಾಡಿ ಅವರ ವಿಚಾರವೇನು? ಅಥವಾ ಕರ್ನಾಟಕದ ಮೇಲೆ ಶತೃತ್ವ ಮಾಡಬೇಕೆನ್ನುವಂತಹ ಉದ್ದೇಶವಿದೆಯೇ? ಪ್ರಾಮಾಣಿಕತೆ ಇದೆಯಾ? ಏನು ಎಂಬುದನ್ನು ತಾವು ಕೇಳಬೇಕು. ಇದು ಉದ್ದೇಶಪೂರ್ವಕವಾಗಿ ಗೋವಾ ಸರ್ಕಾರ ನಡೆದುಕೊಳ್ಳುತ್ತಿದೆ. ಇದು ಒಳ್ಳೆಯ ಸೂಚನೆಯಲ್ಲ. ಆದ್ದರಿಂದ ಮಾನ್ಯ ಈಶ್ವರಪ್ಪನವರು ಇದರ ಬಗ್ಗೆ .....

ಶ್ರೀ ಕೆ.ಎಸ್. ಈಶ್ವರಪ್ಪ (ನೀರಾವರಿ ಸಚಿವರು) : ಅವರು ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಾ?

ಉಪಾಧ್ಯಕ್ಷರು : ಈಗ ಅವರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಅವರು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಇದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ. ಆಯಿತು ಕುಳಿತುಕೊಳ್ಳಿ. ಈಗ ಸದನವನ್ನು ಮಧ್ಯಾಹ್ನ 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸಭೆಯು 2 ಗಂಟೆ 2 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸಭೆಯು ಮತ್ತೆ 3–27 ಗಂಟೆಗೆ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ ಶ್ರೀ ಕೃಷ್ಣ ಅವರು ಪೀಠವನ್ನು ಅಲಂಕರಿಸಿದರು).

(ಈ) ಅಧ್ಯಕ್ಷರ ಅಪ್ಪಣೆ ಮೇರೆಗೆ ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಸಿಮೆಂಟ್ ಫ್ಯಾಕ್ಟರಿಯಿಂದ ಸಿಮೆಂಟನ್ನು ರಾಜ್ಯದ ನಾನಾ ಭಾಗಗಳಿಗೆ ಸಾಗಿಸುತ್ತಿರುವುದರಿಂದ ರಸ್ತೆಗಳು ಹಾಳಾಗಿರುವ ಬಗ್ಗೆ.

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ : ಮಾನ್ಯ ಅಧ್ಯಕ್ಷರೆ, ನಾನು ಚಿತ್ತಾಪುರದ ಈ ರೈಲ್ವೆ.....

ಅಧ್ಯಕ್ಷರು : ನಾನು ಅವಕಾಶವನ್ನು ಕೊಡುತ್ತೇನೆ. ಶೂನ್ಯವೇಳೆಯಲ್ಲಿ ಅನೇಕ ಜನ ಸದಸ್ಯರು ಮಾತನಾಡುವವರು ಇದ್ದಾರೆ.

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ : ಇದೊಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬಿಡಿ.

ಅಧ್ಯಕ್ಷರು : ನಮ್ಮ ಮಾತು ಕೇಳಿಯಪ್ಪ. ನೀವು ರೆಫರೆನ್ಸ್ ಮಾಡಿದರೆ ಮಾನ್ಯ ಮಂತ್ರಿಗಳು ಒಂದು ಉತ್ತರವನ್ನು ಕೊಡುತ್ತಾರೆ. ಆದರೆ ಅದರ ಮೇಲೆಯೇ ಚರ್ಚೆ ಮಾಡಿದರೆ ಸರಿಯಾಗುವುದಿಲ್ಲ.